SWAMY VIVEKANANDA RURAL PRE-UNIVERSITY COLLEGE

# ANKURA

ISSUE-01/VOLUME-01 MONTHLY NEWS LETTER October –2020

## News snippets

October-02- Gandhiji and Lal Bahadur Shastriji's jayanthi celebrations were held at the campus .The honorary members of the management and all staff of the instituton participated in the programme marked by bhajans,readings from the scriptures and speech by staff members Manjunath D.K (PUC)and Manjula (FGC)Sri.SunkaReddy.T Director,SVRES delivered a talk on practicing Gandhian values..Sri.V.Gopal Reddy ,President,SVRES presided over the occasion .



Sri.Venkatesh(Treasurer) and Sri.Ravi (Director ) ,SVRES offering flowers and tributes



September 05 -Staff offering their tributes to Dr.Radhakrishnan ,Former president of India on the occasion of Teachers Day celebrations in our institution

## EDITORIAL

As the world battles with the pandemic, it is becoming obvious day by day that the life is never going to be the same again for you,me and everyone else.

The looming threat of the disease is large over the head, so is the door of opportunity wide open for all of us. The time has given us a breather of hope and a chance to revisit our priorities: to get out of our comfort zones and re-adapt to the needs of the time.

Academic life has seen enormous transformation. Though the destination has been the same ,the journey to the destination has changed. Online classes, webinars, content development, online exams and evaluation and so on. Teachers across the globe have been gradually adapting new tools and enskilling themselves with new technologies to render the content effectively to students. Schools and colleges have moved online into the comfort of the homes. Probably the future of education is this! Whether it is good or bad ,only time will tell. Until then we do not have a choice. We have to make the best of what is available. The only hope is that we are learning and will continue to do so in building a better world for all of us.

As the staff and students create more platforms for exchange of thought, we felt 'Ankura' the monthly news letter published by the institution would give another opportunity to bring out the best of the writing skills and make room for exchange of ideas.

The first issue of this academic year is here. Every month the staff will write articles on various topics of human interest and a panel of peers will discuss the quality of the write-ups and selectively publish them for the benefit of the readers. We hope to enhance the quality of academics and provide for learning and appreciation of diversity in thinking .Students and staff can contribute through write-ups ,letters, to the editor and comments .Your contribution will be greatly encouraged and appreciated.

The news letter will be published online through our website and circulated to students through whatsapp groups .Happy reading…

## Food for thought

'Life offers plenty of things. Broadly ,the choice is between the right and the easy. what we choose determines the level of discretion in our thought.'

-anonymous

ಕೃಷಿ ಸಂಸ್ಕೃತಿಗೆ ಜಯವಾಗಲಿ

ನಾನು ಸಣ್ಣವನಿದ್ದಾಗ ಎಲ್ಲವೂ ಸುಂದರವಾಗಿತ್ತು ಕೃಷಿಯಲ್ಲಿ ಆಧುನಿಕಗೊಳ್ಳದೆ ಕೇವಲ ಮಳೆಗೆ ಅವಲಂಭಿಸಿ ಕೃಷಿಮಾಡುತ್ತಿದ್ದ ಕಾಲವಾಗಿತ್ತು. ನಮ್ಮದು ಅಂತಹ ಕೃಷಿ ಹಿನ್ನಲೆಯ ಕುಟುಂಬವಲ್ಲ, ಆದರೆ ಇದ್ದ ಒಂದಿಷ್ಟು ಜಾಗದಲ್ಲಿ ಪಾಲಿಗೆ ಕೊಟ್ಟು ರಾಗಿಯನ್ನೋ ಜೋಳವನ್ನೋ ಹಾಕಿಸುತ್ತಿದ್ದೆವು. ವಾರಿಗೆ ಪಡೆದವನು ಕೊಟ್ಟಷ್ಟನ್ನು ಪಡೆಯುತ್ತಿದ್ದೆವೆ. ಇನ್ನೊಂದಿಷ್ಟು ಹೊಲವನ್ನು ನನ್ನಮ್ಮನೆ ಹಠಕ್ಕೆ ಬಿದ್ದು ರಾಗಿ, ಮೇವಿಗೆ ಮೆಕ್ಕೆಜೋಳವನ್ನು, ಹುರಳಿ ಗಿಡ, ಸಾಸುವೆ, ಮೆಣಸು, ಸೊಪ್ಪು, ಸ್ವಲ್ಪ ಅದೂ ಇದೂ ತರಕಾರಿ ಗಿಡಗಳನ್ನು ಮೂರು ಎಕರೆ ಹೊಲದಲ್ಲಿ ಅಪ್ಪ ಅಮ್ಮ ಸೇರಿ ಬೆಳೆಯುತ್ತಿದ್ದರು. ನಾವು ನಾಲ್ಕೈದು ಮಕ್ಕಳು ಹೊಲಕ್ಕೆ ಹೋಗಿ ಅಪ್ಪನೊಂದಿಗೆ ನಮಗೆ ತೋಚಿದ್ದು ಮಾಡುತಿದ್ದೆವು , ಕಳೆ ಕೀಳುವುದು ಬೇಲಿ ಸರಿಪಡಿಸುವುದು, ಹಸು ನೋಡಿಕೊಳ್ಳುವುದು ಇತ್ಯಾದಿ ಮಾಡುತ್ತಿ್ದ್ದೆವು.ನಮ್ಮ ಹೊಲ ಜೆಲ್ಲಿಕಲ್ಲು ಮಿಶ್ರಿತ ದಿನ್ನೆ ಮಣ್ಣಿನದು ಅದರಲ್ಲಿ ನನ್ನದು ಕಲ್ಲು ಆಯುವ ಕೆಲಸವೆ ಅಧಿಕವಾಗಿತ್ತು ,ಅಷ್ಟನ್ನು ಬಿಟ್ಟರೆ ಬೇರೇನು ಗೊತ್ತಿರಲಿಲ್ಲ ಮತ್ತು ಮಾಡುತ್ತಿರಲಿಲ್ಲ. ಮೇಲಾಗಿ ನನ್ನಕ್ಕಂದಿರು ನನ್ನಿಂದ ಯಾವ ಕೆಲಸವನ್ನೂ ಮಾಡಿಸುತ್ತಿರಲಿಲ್ಲ .ಸಿಂಹಪಾಲು ಕಷ್ಟದ ಕೆಲಸವನ್ನು ಅವರೇ ಮಾಡುತ್ತಿದ್ದರು. ಅಲ್ಲಿಗೆ ಮಧ್ಯಾನ ಊಟ ಬರುತಿತ್ತು ರಾಗಿಮುದ್ದೆ ,ಬಸಿದ ಸಾರು, ಅನ್ನ ಮತ್ತು ಮಜ್ಜಿಗೆ ಅಪ್ಪನ ಜೊತೆಯೇ ತಿನ್ನುತ್ತಿದ್ದೆ ಅಪ್ಪನೊ ಹಳ್ಳದಲ್ಲಿ ಕೈಕಾಲು ತೊಳೆದು ಬಾಳೆ ಎಲೆ ಹಾಸಿ ರಾಗಿ ಮುದ್ದೆಯಲ್ಲಿ ಬಟ್ಟಲು ಮಾಡುತ್ತಿದ್ದರು.ಅಮ್ಮ ಅದಕ್ಕೆ ಬಸಿದ ಸಾರು ಸುರಿಯುತ್ತಿದ್ದರು ಅಪ್ಪ ಮುದ್ದೆ ಮುರಿದು ಬಟ್ಟಲಲ್ಲಿ ಮುಳಿಗಿಸಿ ಉಣಿಸುತ್ತಿದ್ದರು, ನನಗೆ ಆ ಬಟ್ಟಲ ಮೇಲೆ ಕಣ್ಣು ಕೊನೆಯಲ್ಲಿ ಬಟ್ಟಲಿಗೆ ಕೈಯಾಕಿ ಮುರಿದು ನಾನೇ ತಿನ್ನುತ್ತಿದ್ದೆ ,ಮಜ್ಜಿಗೆ ಅನ್ನದಲ್ಲಿ ಹಸಿ ಮೆಣಸಿನ ಕಾಯಿ ಉಪ್ಪು, ಈರುಳ್ಳಿ, ಕಿವುಚಿ ,ಕಲಸಿ ಉಣಿಸುತ್ತಿದ್ದ ಅಪ್ಪನ ಕೈ ರುಚಿ ಸ್ವರ್ಗಕ್ಕೆ ಸಮ. ನೆನಪಾದರೆ ಬಾಯಲ್ಲಿ ನೀರಾಡುತ್ತದೆ ಇದೆಲ್ಲ ಬಾಲ್ಯವಾಗಿತ್ತು .ಕಾಲಕಾಲಕ್ಕೆ ಮಳೆಯೂ ಕೂಡ ಬೀಳುತಿತ್ತು ಜನರೂ ಕೂಡ ಸಾಕಷ್ಟು ಬೆಳೆಯುತಿದ್ದರು. ನನಗೆ ತಿಳಿದ ಹಾಗೆ





ನಾನು ಒಂಭತ್ತು ಹತ್ತು ಓದುವ ಸಮಯ ಮಳೆ ಇಲ್ಲದೆ ಬರ ಹುಟ್ಟಿಕೊಳ್ತು ,ಜನ ಮತ್ತು ಜಾನುವಾರಗಳ ಗತಿ ಹೇಳ ತೀರದ ಸ್ಥಿತಿಗೆ ಬಂತು . ಜನ ಪೇಟೆಯಲ್ಲಿ ಕೆಲಸ ಮಾಡಬೇಕಾಯ್ತು ಹೀಗೆ ಮುಂದುವರೆದು ಸುಮಾರು ವರ್ಷಕ್ಕೆ ನಗರ ಸಂಸ್ಕ್ರತಿ ಪ್ರವೇಶಿಸಿತು.

ಬಹಳ ಜನ ತಮ್ಮ ತಮ್ಮ ಹೊಲಗಳಲ್ಲಿ ಕಾಲಿ ಬಿಡಲಾಗದೆ ನೀಲಗಿರಿ ತೋಪುಗಳನ್ನು ಕಟ್ಟಿಕೊಂಡರು. ವರ್ಷಕ್ಕೊ , ಎರಡು ವರ್ಷಕ್ಕೋ ಕೈತುಂಬಾ ಖಾಸು ಸಿಕ್ಕುತ್ತಿತ್ತು ,ಹೀಗೇ ಮುಂದುವರೆದು ಹೋಯ್ತು. ನಮ್ಮ ಊರಿನ ಸುತ್ತ ಪೇಟೆಯವರೆಗೂ ನೀಲಗಿರಿ ತೋಪುಗಳು ಬೆಳದೇ ಬೆಳೆದವು. ರೈತರೆಲ್ಲರೂ ಕೃಷಿಗೆ ಕೈ ಮುಗಿದು ಮಗ್ಗ ಬಿಡುವುದು, ಗಾರ್ಮೆಂಟ್ ಗಳಲ್ಲಿ ಕೆಲಸಮಾಡುವುದಕ್ಕೆ ಪೇಟೆ ಸೇರಿತು. ಕೃಷಿ ಸಂಸ್ಕೃತಿಯ ನಾಶದ ಜೊತೆ ರೈತ ಸಂಸ್ಕೃತಿಯೂ ನಾಶವಾಗಿತ್ತು . ಕಾಲಕ್ರಮೇಣ ಬಾವಿಯಲ್ಲಿ ನೀರು ಸೇದುತ್ತಿದ್ದ ನಮ್ಮ ಜನಕ್ಕೆ ಕುಡಿಯುವ ನೀರಿಗೂ ದಾರಿದ್ರ್ಯ ಪ್ರಾರಂಭವಾಯಿತು .ಸರ್ಕಾರ ಕುಡಿಯುವ ನೀರಿಗೆ ಕೊಳವೇ ಬಾವಿ ತೋಡಿಸಿ ,ಸಾವಿರ ಅಡಿಗಳಷ್ಟು ಆಳಕ್ಕೆ ಭೂಮಿಯ ಗರ್ಭ ಬಗೆದು ನೀರು ಕೊಡಲು ಪ್ರಾರಂಭಿಸಿತು. ಶ್ರೀಮಂತ ರೈತರೂ ಕೂಡ ಸಾವಿರಾರು ಸಂಖ್ಯೆಯಲ್ಲಿ ಬೋರ್ವೆಲ್ ತೋಡಿದವು . ಭೂಮಿಯ ಗರ್ಭಪಾತಕ್ಕೆ ಕೈಯಾಕಿ ಸುಮಾರು ಹತ್ತು ಇಪ್ಪತ್ತು ವರ್ಷದಿಂದ ನಮ್ಮ ನೆಲಕ್ಕೆ ನಾವೇ ಬೆಂಕಿ ಹಚ್ಚಿಕೊಂಡಂತಾಗಿ ಎಲ್ಲವೂ ಬೆತ್ತಲಾಗಿ ಹೋದೆವು. ನೀರು ಮಾತ್ರ ಮೌನವಾಗಿ ಪಾತಾಳ ಸೇರಿತು.

ಇತ್ತೀಚಿನ ಸರ್ಕಾರದ ಅರಾಜಕತೆ ,ಔದ್ಯೋಗಿಕ ಅಭದ್ರತೆ, ರಾಜಕೀಯ ಪಲ್ಲಟ ಮತ್ತೂ ಜಾಗತಿಕ ಸಮಸ್ಯೆಗಳಿಂದಾಗಿ ಜನ ನಗರಗಳಲ್ಲಿ ಬೇಸತ್ತು ,ಹಳ್ಳಿ ಸೇರಬೇಕಾಗಿ ಬಂದಿತು.

ಅಷ್ಟರಲ್ಲಿ ಅಂತರ್ಜಲ ನಾಶದ ತಡೆಯುವಿಕೆಗಾಗಿ ಸರ್ಕಾರವೆ ಕೆಲವು ರೈತಪರ ಹೋರಾಟ ಮತ್ತು ಪರಿಸರ ಪ್ರಜ್ಞೆ ಅರಿವಿನಿಂದಾಗಿ ನೀಲಗಿರಿ ಮತ್ತು ಅಕೇಶಿಯ ನಾಶಕ್ಕೆ ಯೋಜನೆ ರೂಪಿಸಿ ದಂಡ ವಿದಿಸುವ ಮೂಲಕ ಮತ್ತು ಅನುಮತಿ ಮೇರೆಗೆ ಇವುಗಳನ್ನು ಬೆಳೆಯ ಬೇಕೆನ್ನುವ ನಿರ್ಧಾರಕ್ಕೆ ಬಂದಿರುವುದರಿಂದ. ಕಾಕತಾಳೀಯ ಎಂಬಂತೆ ಗರಿಷ್ಠ ಮುಖಬೆಲೆಯ ನೋಟುಗಳ ನಿಷೇಧ (ಡಿಮಾನೆಟೈಜೇಶನ್)ನಿಂದ ತತ್ತರಿಸಿದ ಜನ ಕೆಲಸ ಕಳೆದು ಕೊಂಡು ಬಹಳ ಮಂದಿ ಊರು ಸೇರಬೇಕಾಯ್ತು.

ಅಲ್ಲಿಂದ ನಿಧಾನಕ್ಕೆ ಕೃಷಿ ಚಟುವಟಿಕೆ ಹೈನುಗಾರಿಕೆಗಳು ಪ್ರಾರಂಭವಾಯಿತು. ಇತ್ತೀಚಿನ ಕೊರೋನ ಸಂಕಟವಂತ್ತು ಇನ್ನಷ್ಟ ವಲಸಿಗ ನಗರವಾಸಿಗರನ್ನು ಬೀದಿಗೆ ತಲ್ಲಿತು. ಆದರೆ ತನ್ನ ಹಳ್ಳಿಗಳು ಮಾತ್ರ ತನ್ನೊಡಲ ರೈತ ಕೂಸನ್ನು ದೂಡಲಿಲ್ಲ ಕೈಬೀಸಿ ಕರೆಯಿತು ಬಂದ ಬಹಳ ಮಂದಿ ಇರುವ ತಮ್ಮ ಹೊಲಗಳಲ್ಲಿ ನೀಲಗಿರಿ ತಗಿಸಿ ಸಣ್ಣ ಅಥವಾ ದೊಡ್ಡ ಬೆಳೆಗಳನ್ನು ಬೆಳೆಯುತ್ತಿದ್ದಾರೆ ರೈತ ಸಂಸ್ಕೃತಿಯು ಪುನಶ್ಚೇತನ ಪಡೆಯುತ್ತಿದೆ ಎನ್ನುವುದೇ ಸಂತಸದ ಸಂಗತಿ.





ದೊಡ್ಡಬಳ್ಳಾಪುರದಿಂದ ತುಮಕೂರು ಮಾರ್ಗಕ್ಕೆ ಹೋಗುವಾಗ ಕೊಡಗೇಹಳ್ಳಿ ಮುಂದೆ ಬಲಕ್ಕೆ ತಿಪ್ಪೂರು ಪಂಚಾಯಿತಿಯ ಕಡೆ ಹೋದರೆ ಕ್ರಮವಾಗಿ ನೇರಳಘಟ್ಟ,ಮರಳೇನಹಳ್ಳಿ ,ಸೋಮಶೆಟ್ಟಿಹಳ್ಳಿ, ತಿಪ್ಪೂರು ನಂತರ ಸಿಗುವ ಊರು ನನ್ನ ಊರು ವಾಣಿಗರಹಳ್ಳಿ. ಬರುವ ಹಾದಿಯಲ್ಲಿ ನೀಲಗಿರಿ ತೋಪುಗಳು ನೆಲಕಚ್ಚಿ ಬುಡಮೇಲಾಗಿ ಅವುಗಳ ಜಾಗದಲ್ಲಿ ರಾಗಿ,ಜೋಳ, ನೀರಾವರಿಯಲ್ಲಿ ಅಡಿಕೆ ,ತೆಂಗು,ಸೀಬೆ,ಸಪೋಟ,ಬಗೆಬಗೆಯ ತರಕಾರಿ,ಹೂ ತೋಟಗಾರಿಕೆಯನ್ನು ನೋಡಿ ನನ್ನ ಮನಸ್ಸಿಗೆ ಬಹಳ ಸಂತೋಷವಾಯಿತು ,ಬಾಲ್ಯ ನೆನಪಾಯ್ತು . ನಮ್ಮ ಕುಟುಂಬ ರೈತರಲ್ಲದಿದ್ದರೂ ರೈತಾಪಿ ಮನಸ್ಸಿನವರಾಗಿದ್ದೆವು. ಆದರೆ ನಮ್ಮ ಭೂಮಿಯು ಇಂದಿರಾಗಾಂಧಿ ಯವರ "ಉಳುವವನೆ ಭೂಮಿಯ ಒಡೆಯ" ಕಾಯ್ದೆಯ ಅನುಸಾರವಾಗಿ ಕಳೆದುಕೊಂಡೆವು. ನನಗೆ ಈ ಕಾಯ್ದೆಯ ಬಗ್ಗೆ ಬೇಸರವಿಲ್ಲ ಆದರೆ ನಮ್ಮ ಭೂಮಿಯು ಬಡವನೋ!! ಅಥವಾ ಭೂಮಿ ಇಲ್ಲದವನ ಪಾಲಾಗಿದ್ದರೆ ನಮಗೆ ಯಾವ ಬೇಸರವೂ ಆಗುತ್ತಿರಲಿಲ್ಲ .ಬದಲಿಗೆ ಊರ ಶ್ರೀಮಂತರು ಧಣಿಗಳೆನಿಸಿಕೊಂಡವರ ಪಾಲಾದದ್ದು ಬೇಸರ. ಈ ಯೋಜನೆಯು ಹೀಗೆಯೆ ಶ್ರೀಮಂತರ ಪರವಾದುದ್ದೆ ಬಹಳ, ನಮ್ಮ ದೇಶದಲ್ಲಿ ಬಹಳ ಯೋಜನೆಗಳು ಉಳ್ಳವರ ಹಿತಕ್ಕಾಗಿಯೇ ಎಂಬತ್ತಾಗಿ ಬಿಡುತ್ತವೆ. ನಮಗೂ ಕೂಡ ಚೂರು ನೆಲವೂ ಇಲ್ಲದಂತಾಯಿತು. ಆದರೆ ನಮ್ಮನೆಯಲ್ಲಿ ಹೀಗಲೂ ಹಸುಗಳನ್ನು ಸಾಕುವುದು ಮತ್ತು ಪಾಲಿಗೆ ಅಥವಾ ಗುತ್ತಿಗೆಗೆ ನೆಲಪಡೆದು ಕೃಷಿಮಾಡುತ್ತಿದ್ದಾರೆ. ನಾನು ದೂರದಿಂದಲೆ ಇವನ್ನೆಲ್ಲ ನೋಡಿ ಸಂತೋಷಪಡುತ್ತಿರುತ್ತೇನೆ ಅಷ್ಟೆ. ಒಟ್ಟಿನಲ್ಲಿ ಜಾಗತಿಕ ಪ್ರಭಾವಕ್ಕೆ ಜನ ನಾಶವಾಗದೆ ಪ್ರಕೃತಿಯೊಂದಿಗೆ ನೆಡೆದರೆ ಅದುವೇ ಸ್ವರ್ಗ ಅನ್ನುವುದಷ್ಟೆ ಸತ್ಯ. ಪರಿಸರನಾಶಕಾರಕ ಸಂತತಿಯಾದ ನೀಲಗಿರಿಯ ನಾಶವಾಗಲಿ, ನಮ್ಮ ಕೃಷಿ ಸಂಸ್ಕೃತಿಗೆ ಜಯವಾಗಲಿ, ರೈತ ಸಂಸ್ಕೃತಿ ಜೀವಂತವಾಗಲಿ. ನಮ್ಮ ಜನ ನೆಮ್ಮದಿಯಾಗಿ ಬದುಕಲಿ ಎನ್ನುವುದೇ ನನ್ನ ಆಸೆ.

**ಲಕ್ಷ್ಮೀನಾರಾಯಣ ಕೆ ವಾಣಿಗರಹಳ್ಳಿ**